1362 (1626) ಶ್ರೀ ಸಿದ್ದು ಸಾವದಿ (ಜಮಖಂಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ನಗರಗಳ ಮೂಲ ಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಎ.ಡಿ.ಬಿ. ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಯೋಜನೆಯ ಕಾರ್ಯ ಈಗ ಯಾವ ಹಂತದಲ್ಲಿದೆ;

ಆ) ಕಾಮಗಾರಿಗಳನ್ನು ಆಯ್ಕೆ ಮಾಡಿ ಮೂರು ವರ್ಷಗಳಾದರೂ ಕೆಲಸವನ್ನು ಪ್ರಾರಂಭಿಸದೆ ಇರಲು ಕಾರಣಗಳೇನು;

ಇ) ಈ ರೀತಿ ವಿಳಂಬ ಧೋರಣೆಯಿಂದ ಮೊದಲೇ ಹಿಂದುಳಿದ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗುವುದಿಲ್ಲವೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಈ ಯೋಜನೆಯ ಯೋಜನಾ ವರದಿ ತಯಾರಿಸಲು ಸಮಾಲೋಚಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, 2007ರ ಆಗಸ್ಟ್‌ನಲ್ಲಿ ಸಮಾಲೋಚಕರನ್ನು ನೇಮಿಸುವ ನಿರೀಕ್ಷೆ ಇದೆ. ನೇಮಕಗೊಂಡ ಸಮಾಲೋಚಕರು ಯೋಜನಾ ಅಂದಾಜು ಮತ್ತು ವಿಸ್ತೃತ ಯೋಜನಾ ವರದಿ ತಯಾರಿಸಿದ ನಂತರ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸ ಲಾಗುವುದು.

ಆ) ಈ ಯೋಜನೆಗೆ ಡಿಸೆಂಬರ್–2006 ಜನವರಿ–2007ರಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಅನುಮೋದನೆಗೆ ನೀಡಿದೆ. ಸಾಲದ ಒಡಂಬಡಿಕೆಗೆ 2007ರ ಅಂತ್ಯದಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಸಹಿ ಮಾಡುವ ಸಾಧ್ಯತೆಯಿದ್ದು, ಅನಂತರ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

ಇ) ಈ ಯೋಜನೆಯ ಪ್ರಕ್ರಿಯೆಯು ಚಾಲನೆಯಲ್ಲಿದ್ದು, ಯೋಜನಾ ಅನುಷ್ಠಾನದಲ್ಲಿ ಯಾವುದೇ ವಿಳಂಬವಾಗಿಲ್ಲದೇ ಇರುವುದರಿಂದ, ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

1363 (1362) ಶ್ರೀ ಶಿವಾನಂದ ಎಸ್.ಪಾಟೀಲ್(ಬಸವನ ಬಾಗೇವಾಡಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು;

ಆ) ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನವನ್ನು ಸರ್ಕಾರದಿಂದ ನೀಡಲಾಗುತ್ತಿದೆಯೇ;

ಇ) ನೀಡದೆ ಇದ್ದಲ್ಲಿ ಹಿಂದೆ ಪೋರ್ಚುಗೀಸರ ವಿರುದ್ಧ ಗೋವಾ ವಿಮೋಚನೆಗಾಗಿ ಹೋರಾಟ ನಡೆಸಿ ತಮ್ಮ ಆಸ್ತಿ–ಪಾಸ್ತಿ ಕಳೆದುಕೊಂಡು ಅಸಹಾಯಕ ಸ್ಥಿತಿಯಲ್ಲಿರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನವನ್ನು ನೀಡಲು ಸರ್ಕಾರ ಕೈಗೊಂಡ ಕ್ರಮವೇನು;

ಈ) ಗೌರವಧನ ನೀಡುವ ಉದ್ದೇಶವಿದ್ದಲ್ಲಿ ಎಷ್ಟು ಜನರಿಗೆ ಎಷ್ಟು ಮಾಸಿಕ ಗೌರವ ಧನ ನೀಡಲಾಗುವುದು;

ಉ) ಯಾವ ಕಾಲಮಿತಿಯೊಳಗೆ ಗೌರವ ಧನವನ್ನು ನೀಡಲಾಗುವುದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಶ್ರೀ ಜಿ.ಎಲ್.ರಾಯರೆಡ್ಡಿಯವರು ನೀಡಿದ ಪ್ರಮಾಣ ಪತ್ರದ ಆಧಾರದಂತೆ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ : 1312.

ಆ) ಇಲ್ಲ.

ಇ) 2007–08ನೇ ಸಾಲಿನ ಆಯವ್ಯಯದಲ್ಲಿ ಗೋವಾ ವಿಮೋಚನಾ ಚಳುವಳಿಗಾರರಿಗೆ ಮಾಸಿಕ ರೂ.2000/–ಗಳನ್ನು ರಾಜ್ಯ ಗೌರವಧನ ನೀಡುವ ಬಗ್ಗೆ ಘೋಷಿಸಲಾಗಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಕಾಲಮಿತಿ ನಿಗದಿಪಡಿಸಿಲ್ಲ.

1365 (1358) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು, ಬಂಕಾಪುರ ಪಟ್ಟಣದಲ್ಲಿ ಆರಕ್ಷಕ ಠಾಣೆಯ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಬಂಕಾಪುರ ಪಟ್ಟಣದಲ್ಲಿ ಆರಕ್ಷಕ ಠಾಣೆ ಕಟ್ಟಡ ನಿರ್ಮಾಣ ಕಾರ್ಯವನ್ನು ಸರ್ಕಾರದಿಂದ ಯಾವಾಗ ಪ್ರಾರಂಭಿಸ ಲಾಗುವುದು?